ಕೆಲವು ಕಡೆಗಳಲ್ಲಿ ಉದ್ಯೋಗ ಖಾಲಿ ಇದೆ. ಇನ್ನು ಕೆಲವು ಕಡೆ ಉದ್ಯೋಗ ಎನಿಮಯ ಕೇಂದ್ರವೆಂದು ಹೇಳುತ್ತೀರಿ, ಒಟ್ಟಿನಲ್ಲಿ ಇದು ಗೊಂದಲಮಯವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಸರಕಾರದವರು ಹೊಸ ಉದ್ಯೋಗ ನೀತಿಯನ್ನು ಪ್ರಾರಂಭ ಮಾಡುತ್ತೀರಾ ಎಂದು ಅಂತಿಮವಾಗಿ ಹೇಳುತ್ತಿದ್ದೇನೆ. ಅರೆಕಾಲಿಕ, ಸ್ವೆಫೆಂಡರಿ ಪದವೀಧರರು ಹತ್ತಾರು ವರುಷಗಳಿಂದ ತಮ್ಮ ಉದ್ಯೋಗಕ್ಕಾಗಿ ಕಾಲ ಕಳೆಯುತ್ತಿದ್ದಾರೆ. ಇದರ ಬಗ್ಗೆ ಸರಕಾರ ತನ್ನ ನಿರ್ಧಾರ ಏನು ಎಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಯಡಿಯೂರಪ್ಪನವರ ಮಾತಿಗೆ ನಾನು ಹೇಳಿದ್ದೇನೆ. ಈಗ ಏನಾಗಿದೆಯೆಂದರೆ, ಸರ್ಕಾರ ನಡೆಯುವ ನೀತಿಯೇ ನೀತಿ ಆಗಿಬಿಟ್ಟಿದೆ. ಅದಕ್ಕೆ ತಾವು ಹೇಳಿದ್ದು ಸರಿ. ಸ್ಪಷ್ಟವಾದಂತಹ ಒಂದು ನೀತಿ ಇರಬೇಕಾಗುತ್ತದೆ. ಅದು ಇಲ್ಲದೆ ಇದ್ದರೆ ಏನಾಗುತ್ತದೆಯೆಂದರೆ, ಇದೇ ತರಹ ಅಡಾಕ್ ಅಪ್ರೋಚ್ ಮತ್ತೆ ಬೇರೆ ಬೇರೆ ರೀತಿಯಲ್ಲಿ ಆಗಿ, ತಾತ್ಕಾಲಿಕವೇ ಖಾಯಂ ಆಗಿಬಿಟ್ಟಿದೆ, ಖಾಯಂ ತಾತ್ಕಾಲಿಕವಾಗಿದೆ. ಈ ತರಹ ಡಿಸ್ಟಾರ್‌ಷನ್ಸ್ ಬಹಳ ನಡೆದಿದೆ. ಅದನ್ನು ನಿಲ್ಲಿಸಲಿಕ್ಕೆ ತಾವು ಒಳ್ಳೆಯ ಸೂಚನೆ ಕೊಟ್ಟಿದ್ದೀರಿ. ನನಗೂ ಅನ್ನಿಸುತ್ತದೆ, ಇಂತಹ ಉದ್ಯೋಗ ನೀತಿ ಬೇಕಾಗುತ್ತದೆ. ಅದಕ್ಕೆ ಅನುಗುಣವಾಗಿ ನಡೆಯಬೇಕಾಗುತ್ತದೆ. ಆ ನೀತಿಗೆ ಏನಾದರೂ ರಿಲ್ಯಾಕ್ಸ್ ಮಾಡಿದರೆ ನಾವು ಅದಕ್ಕೆ ಪ್ರತ್ಯೇಕವಾದಂತಹ, ಸರಿಯಾದಂತಹ ಸಬೂಬು ಕೊಡಬೇಕಾಗುತ್ತದೆ.

(ಗೊಂದಲ)

ವಿಷಯ:- ಮದ್ಯಪಾನ ನಿರೋಧ ಜಾರಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೨:- (೪೨೪)
ಶ್ರೀ ಡಿ.ಆರ್. ಪಾಟೀಲ್ (ಗದಗ್)
ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮದ್ಯಪಾನದಿಂದ ಬಡ ಕುಟುಂಬಗಳ ಆರ್ಥಿಕ ಸಾಮಾಜಿಕ ಸ್ಥಿತಿಗಳಿಗೆ ಧಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಪಾನ ನಿರೋಧ ಜಾರಿಗೊಳಿಸಲು ಸರ್ಕಾರ ಪರಿಶೀಲಿಸುವುದೇ?
ಇ) ಪಾನ ನಿರೋಧ ಜಾರಿಯಿಂದ ರಾಜ್ಯದ ಬೊಕ್ಕಸಕ್ಕೆ ಆಗುವ ಕೊರತೆ ಎಷ್ಟು?
ಈ) ಈ ಕೊರತೆ ತುಂಬಿಕೊಳ್ಳಲು ಪರ್ಯಾಯಗಳನ್ನು ಸರ್ಕಾರ ಪರಿಶೀಲಿಸುತ್ತಿದೆಯೇ?

ಶ್ರೀ. ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

ಹೌದು.
ಇಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿಲ್ಲ.
ರೂ. ೫೪೦.೭೪ ಕೋಟಿ ರೂ.ಗಳು.
(ಹಾಲಿ ದರಗಳ ಮೇರೆಗೆ)
'ಆ' ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಡಿ.ಆರ್. ಪಾಟೀಲ್:- ಸನ್ಮಾನ್ಯ ಅಧ್ಯಕ್ಷರೇ , ಮದ್ಯಪಾನದಿಂದ ಸಾಕಷ್ಟು ಕುಟುಂಗಳಿಗೆ ತೊಂದರೆ ಆಗುತ್ತಿದ್ದರೂ ಸಹ ಪಾನ ನಿರೋಧವನ್ನು ಜಾರಿಗೊಳಿಸಲು ಪರಿಶೀಲಿಸದೆ ಇರಲಿಕ್ಕೆ ಕಾರಣ ಏನು ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಈ ಪಾನನಿರೋಧವನ್ನು ಒಮ್ಮೆ ಜಾರಿಗೊಳಿಸಲಾಗಿದೆ. ಅದನ್ನು ಕೈಬಿಟ್ಟು ಈಗ ಪುನಃ ಹಿಂದಿನ ಪರಿಸ್ಥಿಗೆ ಬಂದಿದ್ದಾರೆ. ಈಗ ಈ ಒಂದು ಮದ್ಯಪಾನದಿಂದ ಬಡ ಕುಟುಂಬಗಳಿಗೆ ಮತ್ತು ಯುವಕರಿಗೆ ತೊಂದರೆ ಆಗದ ಹಾಗೆ ಯಾವರೀತಿಯಲ್ಲಿ ಒಂದು ಶೀಲ ಸಂವರ್ಧನೆ ಮಾಡಬಹುದು ಎಂದು ಯೋಚನೆ ಮಾಡಿ ಅದಕ್ಕಾಗಿ ಸರ್ಕಾರದವರು ಎರಡು ಮೂರು ನಿರ್ಣಯಗಳನ್ನು ಪ್ರಮುಖವಾಗಿ ಇತ್ತೀಚೆಗೆ ತೆಗೆದುಕೊಂಡಿದ್ದೇವೆ. ಒಂದು ವಿಷಯ ಏನೆಂದರೆ, ಈಗ ರಾಜ್ಯ ಮತ್ತು ರಾಷ್ಟ್ರ ಹೆದ್ದಾರಿಗಳಲ್ಲಿ ಸುಮಾರು ಇನ್ನೂರು ಮೀಟರ್ ಅಂತರದಲ್ಲಿ ಯಾವುದೇ ರೀತಿಯಾದಂತಹ ಬಾರ್‌ಗಳಾಗಲಿ, ಬಾರ್‌ಗಳ ಲೈಸೆನ್ಸ್ ಆಗಲಿ ಕೊಡಬಾರದು, ವೈನ್ ಶಾಪ್ ಕೂಡ ಇರಬಾರದು ಎಂದು ಒಂದು ನಿರ್ಣಯ ಇದೆ. ಅದು ದಿನಾಂಕ ೧-೭-೩ ರಿಂದ ಏನು ಲೈಸೆನ್ಸ್ ರಿನ್ಯೂವಲ್‌ಗೆ ಬರುತ್ತಾರೆ, ಆಗ ನಿರ್ಣಯಕ್ಕೆ ಬರತಕ್ಕಂತಹ ಲೈಸೆನ್ಸ್‌ಗಳನ್ನು ನಾವು ಮುಂದುವರಿಸುವುದಿಲ್ಲ. ಮತ್ತೆ ಹೊಸ ಲೈಸೆನ್ಸ್‌ನ್ನು ಕೂಡ ನಾವು ಇಂದಿನಿಂದ ಕೊಡುತ್ತಾ ಇಲ್ಲ. ಇನ್ನು ಎರಡನೆಯದೇನೆಂದರೆ, ಇಪ್ಪತ್ತೊಂದು ವರ್ಷ ವಯಸ್ಸಿನ ಒಳಗೆ ಇರುವ ಯುವಕರು ಏನಿದ್ದಾರೆ ಅವರಿಗೆ ಯಾವುದೇ ರೀತಿಯಲ್ಲಿ ಈ ಬಾರ್‌ಗಳಲ್ಲಾಗಲಿ, ವೈನ್ ಶಾಪ್‌ಗಳಲ್ಲಾಗಲಿ, ಅಥವಾ ಕಳ್ಳು, ಶರಾಬು ಅಂಗಡಿಗಳಲ್ಲಿ ಕೂಡ ಲಿಕ್ಕರ್ ಸರ್ವ್ ಮಾಡಬಾರದು ಎಂದು ಕೂಡ ನಾವು ಎರಡನೆಯ ನಿಯಮವನ್ನು ಹಾಕಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ಪಾನನಿರೋಧವನ್ನು ಸರ್ಕಾರದವರು ಜಾರಿ ಮಾಡುತ್ತೀರೋ ಎನ್ನತಕ್ಕಂಥಾದ್ದು, ಇದು ಮೂಲಭೂತವಾದ ಪ್ರಶ್ನೆ. ಆದರೆ ನೀವು ರಸ್ತೆಯಲ್ಲಿ ಇದನ್ನು ನಿಲ್ಲಿಸಿದ್ದೀವೆ, ಇಪ್ಪತ್ತೊಂದು ವರ್ಷದ ಯುವಕರಿಗೆ ನಿಲ್ಲಿಸಿದ್ದೀವೆ, ಇದೆಲ್ಲಾ ಬೇಡ. ಇದು ಪ್ರಶ್ನೆ ಅಲ್ಲ. ಮೂಲಭೂತವಾಗಿ ಪಾನನಿರೋಧವನ್ನು ಜಾರಿಗೆ ತರುತ್ತೀರ ಎನ್ನುವುದು ಒಂದನೆಯದು. ಮತ್ತು ನಾವು ಪಾನನಿರೋಧವನ್ನು ಜಾರಿಗೆ ತರಬೇಕಾದರೆ ನಮ್ಮಲ್ಲಿಯೇ ಒಂದು ಶಿಸ್ತು ಬರಬೇಕು. ಮಂತ್ರಿಗಳಾಗಲಿ, ಶಾಸಕರಾಗಲಿ, ರಾಜಕಾರಣಿಗಳಾಗಲಿ ನಾವು ಕುಡಿಯುವುದಿಲ್ಲ, ನಾವೆಲ್ಲ ನಾಳೆಯಿಂದ ಕುಡಿಯುವುದನ್ನು ನಿಲ್ಲಿಸಿದ್ದೇವೆ, ಬಾರ್‌ಗಳಿಗೆ ಹೋಗುವುದಿಲ್ಲ, ಕದ್ದು ಕುಡಿಯುವುದಿಲ್ಲ ಎಂಬ ನೀತಿಯನ್ನು ನಾವು ಹಾಕಿಕೊಳ್ಳಬೇಕು. ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ವಾಟಾಳ್ ನಾಗರಾಜ್‌ರವರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಆದ್ದರಿಂದ ಈ ಸದನದ ಸಾಕ್ಷಿಯಾಗಿ ನಾನು ಹೇಳುತ್ತೇನೆ, ನಾನು ಹಿಂದೆಯೂ ಕುಡಿದಿಲ್ಲ, ಈಗಲೂ ಕುಡಿಯುತ್ತಿಲ್ಲ, ಮುಂದೆಯೂ ಕುಡಿಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಾವು ಇಬ್ಬರೂ ಕುಡಿಯುವುದು ಬಿಟ್ಟರೆ ಇದು ನಿಲ್ಲುವುದಿಲ್ಲ. ಅದನ್ನು ನಿಲ್ಲಿಸುವುದಕ್ಕೆ ಏನು ಸಮಸ್ಯೆ ಎಂದು ನಾನು ಕೇಳುವುದು. ಈ ಸದನದ ಸಾಕ್ಷಿಯಾಗಿ ಹೇಳುತ್ತೇನೆ, ನಾನು ಏನೂ ಕುಡಿಯುವುದಿಲ್ಲ. ನಾನು ಕಾಫಿಯನ್ನೂ ಕುಡಿಯುವುದಿಲ್ಲ, ಟೀಯನ್ನೂ ಕುಡಿಯುವುದಿಲ್ಲ, ಇನ್ನು ಮಿಕ್ಕಿದ್ದು ಕುಡಿಯುವುದು ಏನು ಬಂತು?

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಈ ಪಾನನಿರೋಧವನ್ನು ಪ್ರಾಯೋಗಿಕವಾಗಿಯಾದರೂ ಕೆಲವು ಜಿಲ್ಲೆಗಳಲ್ಲಿ ಜಾರಿಗೊಳಿಸಲಿಕ್ಕೆ ಸರ್ಕಾರ ವಿಚಾರ ಮಾಡುವುದೆ?

ಒಬ್ಬ ಮಾನ್ಯ ಸದಸ್ಯರು:- ಯಾರು ಕಾಫಿ, ಟೀ ಕುಡಿಯುವುದಿಲ್ಲ ಅವರೇ ಜಾಸ್ತಿ ಲಿಕ್ಕರ್ ಕುಡಿಯುವುದು.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಇದು ಹಕ್ಕುಚ್ಯುತಿ ಆಗುತ್ತದೆ. ನಮ್ಮ ಸ್ನೇಹಿತರು ಈ ರೀತಿ ನನ್ನ ಮೇಲೆ ಆರೋಪಣೆ ಮಾಡತಕ್ಕಂಥಾದ್ದು ಅಲ್ಲ. ಏಕೆಂದರೆ, ಅನೇಕ ಸಾರಿ ಅವರೂ ನಾವೆಲ್ಲಾ ಒಟ್ಟೊಟ್ಟಿಗೆ ಓಡಾಡಿದ್ದೇವೆ. ಅದರ ವಾಸನೆಯೂ ಕೂಡ ನನಗೆ ಸಿಕ್ಕಿಲ್ಲ.

ಶ್ರೀ ಎಂ.ಎ. ವೆಂಕಟಪ್ಪ:- ಮಜ್ಜಿಗೆ ಕುಡಿದಿದ್ದಾರೆ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಈಚಲ ಮರದ ಕೆಳಗೆ ಕುಳಿತು ಮಜ್ಜಿಗೆಯನ್ನು ಕುಡಿದರೆ ಅದನ್ನು ಹೆಂಡ ಎಂದು ಹೇಳುತ್ತಾರೆ. ನಾವು ಏನು ಮಾಡುವುದಕ್ಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಪಾನನಿರೋಧವನ್ನು ಪ್ರಾಯೋಗಿಕವಾಗಿಯಾದರೂ ಕೆಲವು ಜಿಲ್ಲೆಗಳಲ್ಲಿ ಜಾರಿಗೊಳಿಸಲಿಕ್ಕೆ ಸರ್ಕಾರ ವಿಚಾರ ಮಾಡುವುದೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಸದಸ್ಯರು ಏನು ಒಂದು ಸೂಚನೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಆಲೋಚನೆ ಮಾಡುತ್ತೇನೆ.

ವಿಷಯ:- ಕನ್ನಡ ಚಲನಚಿತ್ರಗಳ ತಯಾರಿಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩:- (೨೨)
ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ೧೯೯೨-೯೩ನೇ ಸಾಲಿನಲ್ಲಿ ರಾಜ್ಯದಲ್ಲಿಯೇ ತಯಾರಾದ ಕನ್ನಡ ಚಲನಚಿತ್ರಗಳೆಷ್ಟು. ಮತ್ತು ಹೊರರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳೆಷ್ಟು?

ಆ) ರಾಜ್ಯದಲ್ಲಿಯೇ ತಯಾರಾದ ಕನ್ನಡ ಚಲನಚಿತ್ರಗಳಿಗೆ ನೀಡುತ್ತಿರುವ ಸಹಾಯಧನದ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರವು ಉದ್ದೇಶಿಸಿರುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯ ಮಂತ್ರಿಗಳು)

೭೬
ವಿವರಗಳು ಲಭ್ಯವಿರುವುದಿಲ್ಲ.
ಇಲ್ಲ.

ಶ್ರೀ ಕೆ.ಆರ್. ಹರ್ಷಕುಮಾರ್ ಗೌಡ:- ಮಾನ್ಯ ಅಧ್ಯಕ್ಷರೇ, ಹೊರ ರಾಜ್ಯದಲ್ಲಿ ತಯಾರಾದ ಕನ್ನಡ ಚಲನಚಿತ್ರಗಳ ವಿವರಗಳು ಲಭ್ಯವಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಹೊರರಾಜ್ಯಗಳಲ್ಲಿ ಕನ್ನಡ ಚಲನಚಿತ್ರಗಳ ಚಿತ್ರೀಕರಣ ಆಗಿಲ್ಲವೇ? ಅದರ ಬಗ್ಗೆ ವಿವರಗಳು ಏಕೆ ಲಭ್ಯವಾಗಿಲ್ಲ ಎನ್ನುವುದರ ಬಗ್ಗೆ ಮಾಹಿತಿ ಬೇಕು. ಎರಡನೇ ಪ್ರಶ್ನೆಯಲ್ಲಿ ರಾಜ್ಯದಲ್ಲಿಯೇ ತಯಾರಾದ ಕನ್ನಡ ಚಲನಚಿತ್ರಗಳಿಗೆ ನೀಡುತ್ತಿರುವ ಸಹಾಯಧನ ಪ್ರಮಾಣವನ್ನು ಹೆಚ್ಚು ಮಾಡುವ ಉದ್ದೇಶ ಏನಾದರೂ ಸರ್ಕಾರಕ್ಕೆ ಇದೆಯೆ? ಎಂದು ಕೇಳಿದ್ದೇನೆ. ಅದಕ್ಕೆ ಮುಖ್ಯಮಂತ್ರಿಗಳು ಇಲ್ಲವೆಂದು ಹೇಳಿದ್ದಾರೆ. ಈಗ ಅನಧಿಕೃತವಾಗಿ, ಅಕ್ರಮವಾಗಿ ಕೇಬಲ್ ಟಿ.ವಿ ಜಾಲ ನಡೆಯುತ್ತಿದೆ. ಅದರಿಂದ ಪರೋಕ್ಷವಾಗಿ ಚಲನಚಿತ್ರ ಮಾಧ್ಯಮದ ಮೇಲೆ ಪ್ರಭಾವ ಬೀರಿದೆ. ನಾನು ತಮ್ಮ ಮುಖಾಂತರ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈ ಅಕ್ರಮವಾಗಿ ನಡೆಯುತ್ತಿರುವ ವ್ಯವಹಾರವನ್ನು ನಿಲ್ಲಿಸುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ. ಎಷ್ಟು ಜನರ ಮೇಲೆ ಮೊಕದ್ದಮೆ ಹೂಡಿದೆ.